ದುರ್ದೈವ್ಯವಾಗಿದೆ. ಈಗ ೧೫೦ ಬೆಡ್‌ಗಳ ಸಾಮರ್ಥ್ಯದ ಆಸ್ಪತ್ರೆಯನ್ನಾದರೂ ದಯವಿಟ್ಟು ಅಧ್ಯಕ್ಷರು ಮಾಡಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಹುಣಸೂರು ಪಟ್ಟಣದಲ್ಲಿ ವಿಜ್ಞಾನ ಮಹಾವಿದ್ಯಾಲಯ ಪ್ರಾರಂಭಿಸುವುದು.

೧೬೨(೧೬೧೬)

ಶ್ರೀ ವಿ.ಪಾಪಣ್ಣ(ಹುಣಸೂರು): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧. ಹುಣಸೂರು ಪಟ್ಟಣದಲ್ಲಿ ಶ್ರೀ ಡಿ.ದೇವರಾಜ ಅರಸ್ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನದ ವಿಷಯ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

೨. ಹಾಗಿದ್ದಲ್ಲಿ ವಿಜ್ಞಾನ ವಿಷಯವನ್ನು ಮಂಜೂರಾತಿ ಮಾಡದೇ ಇರುವುದು ಕಟ್ಟಡ ಇಲ್ಲದೇ ಇರುವುದಕ್ಕೆ ಕಾರಣಗಳೇನು?

೩. ಪ್ರಥಮ ದರ್ಜೆ ಕಾಲೇಜು ಕಟ್ಟಡದ ಕಾಮಗಾರಿ ಕೆಲಸ ಮಂದಗತಿಯಲ್ಲಿ ನಡೆಯುತ್ತಿದ್ದು ಹಲವು ವರ್ಷಗಳಿಂದ ಕೆಲಸ ನಡೆಯುತ್ತಿದ್ದರೂ ಪೂರ್ಣವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

೪. ಹಾಗಿದ್ದಲ್ಲಿ ಪೂರ್ಣಗೊಳ್ಳಲು ಸರ್ಕಾರವು ಯಾವ ಕ್ರಮ ತೆಗೆದುಕೊಂಡಿದೆ?

ಡಾ: ಜಿ.ಪರಮೇಶ್ವರ್: (ಉನ್ನತ ಶಿಕ್ಷಣ ಸಚಿವರು):

೧. ಹೌದು.

೨. ವಿಜ್ಞಾನ ಕೋರ್ಸ್‌ನ್ನು ತೆರೆಯಲು ಅಗತ್ಯವಾದ ಮೂಲಭೂತ ಸೌಕರ್ಯ ಮತ್ತು ಅಧ್ಯಾಪಕರ ಕೊರತೆಯಿಂದ ಮಂಜೂರಾಯಿ ನೀಡಿರುವುದಿಲ್ಲ. ಪ್ರಸ್ತುತ ಕಟ್ಟಡ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ.

೩. ಹೌದು.

೪. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡ ನಿರ್ಮಾಣವನ್ನು ಹಾಗೂ ಈಗಾಗಲೇ ಕಟ್ಟಡ ನಿರ್ಮಾಣ ಪ್ರಾರಂಭಗೊಂಡಿರುವ ಕಾಲೇಜುಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹುಡ್ಕೊ ಸಂಸ್ಥೆಯಿಂದ ರೂ.೧೮೭೧.೦೦

ಲಕ್ಷಗಳ ನೆರವನ್ನು ಪಡೆಯಲು ನಿರ್ಧರಿಸಲಾಗಿದೆ.

೧೧.೨೦ ಎ.ಎಂ.

ಶ್ರೀ ವಿ.ಪಾಪಣ್ಣ: ಮಾನ್ಯ ಅಧ್ಯಕ್ಷರೆ ಉತ್ತರವನ್ನು ಒದಗಿಸಿದ್ದಾರೆ. ಹುಣಸೂರು ಪಟ್ಟಣದಲ್ಲಿ ದಿವಂಗತ ದೇವರಾಜ್ ಅರಸು ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನ ಕೋರ್ಸ್ ಇಲ್ಲ. ಅದಕ್ಕೆ ಮೂಲಭೂತ ಸೌಕರ್ಯ ಇಲ್ಲ. ಮಂಜೂರಾತಿ ಕೊಟ್ಟಿಲ್ಲ ಅಲ್ಲಿ ಕಟ್ಟಡವಿಲ್ಲವೆಂದು ಹೇಳಿದ್ದಾರೆ. ಹತ್ತಾರು ವರ್ಷಗಳಿಂದ ದಿವಂಗತ ದೇವರಾಜು ಅರಸ್ ಅವರ ಹೆಸರಿನಲ್ಲಿ ಒಂದು ಕಟ್ಟಡ ಪ್ರಾರಂಭವಾಗಿ ಈಗ ಅದು ಸ್ಥಗಿತಗೊಂಡಿದೆ. ಕಳೆದ ಸಾಲಿನಲ್ಲಿ ಕೇವಲ ೩೩,೦೦೦ ರೂಪಾಯಿ ಕೊಟ್ಟಿದ್ದಾರೆ. ಆ ಕಟ್ಟಡ ಪೂರ್ತಿಯಾಗಬೇಕಾದರೆ ಕನಿಷ್ಟ ಅದಕ್ಕೆ ೨೫ ಲಕ್ಷ ರೂಪಾಯಿ ಬೇಕು. ದಿವಂಗತ ದೇವರಾಜ್ ಅರಸ್ ಅವರು ಮುಖ್ಯಮಂತ್ರಿಯಾಗಿದ್ದಂತಹ ಕಾಲದಲ್ಲಿ ಇಡೀ ರಾಜ್ಯದ ಎಲ್ಲ ಕ್ಷೇತ್ರದ ಪ್ರತಿನಿಧಿಗಳನ್ನು ತೃಪ್ತಿಪಡಿಸುವುದಕ್ಕೋಸ್ಕರ ವಿಜ್ಞಾನ ಕ್ಷೇತ್ರವನ್ನು ಮಾಡಿದ್ದು ಅವರಿಗೆ ಅನ್ಯಾಯವಾಗಿರುವಂತಹ ಈ ಕ್ಷೇತ್ರದಲ್ಲಿ ದಯಮಾಡಿ ೨೫ ಲಕ್ಷ ರೂಪಾಯಿಗಳನ್ನು ಈ ವರ್ಷ ಕೊಡುವುದಕ್ಕೆ ಅವಕಾಶ ಮಾಡಿ ವಿಜ್ಞಾನ ಕಾಲೇಜನ್ನು ಪರಿಪೂರ್ಣ ಮಾಡುವುದಕ್ಕೆ ಅವಕಾಶ ಮಾಡಿಕೊಡಲು ಸನ್ಮಾನ್ಯ ಮಂತ್ರಿಗಳು ಭರವಸೆ ನೀಡಬೇಕೆಂದು ಕೇಳುತ್ತಿದ್ದೇನೆ.

ಡಾ: ಜಿ.ಪರಮೇಶ್ವರ್: ಮಾನ್ಯ ಅಧ್ಯಕ್ಷರೆ, ಹುಣಸೂರಿನಲ್ಲಿ ಪ್ರಥಮ ದರ್ಜೆ ಕಾಲೇಜು ಮೊದಲು ಪ್ರಾರಂಭವಾಗಿದ್ದು ಮುನಿಸಿಪಾಲಿಟಿ ವತಿಯಿಂದ. ೧೯೯೩ರಲ್ಲಿ ಇದನ್ನು ಸರ್ಕಾರ ವಹಿಸಿಕೊಂಡಿತು. ಅದಕ್ಕೆ ಒಂದು ಕಟ್ಟಡ ಕಟ್ಟಬೇಕೆಂದು ಎಸ್ಟಿಮೇಟ್ ಮಾಡಿರುವುದು ಸುಮಾರು ೬೨ ಲಕ್ಷ ರೂಪಾಯಿ ಬೇಕೆಂದು ಇದೆ. ಅದರಲ್ಲಿ ಈಗಾಗಲೇ ೨೭.೬೧ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ. ಇನ್ನು ಅದಕ್ಕೆ ೨೫ ಲಕ್ಷ ರೂಪಾಯಿ ಖರ್ಚು ಮಾಡಬೇಕಾಗಿದೆ. ಈ ಸರ್ಕಾರದಲ್ಲಿ ಒಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಏನೆಂದರೆ ಹುಡ್ಕೋ ನೆರವಿನಿಂದ ಸುಮಾರು ೧೯ ಕೋಟಿ ರೂಪಾಯಿಯನ್ನು ನಮ್ಮ ಉನ್ನತ ಶಿಕ್ಷಣ ಇಲಾಖೆಗೆ ಸಾಲ ತೆಗೆದುಕೊಂಡು ಆ ಮೂಲಕ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಏನು ಅರ್ಧಂಬರ್ಧ, ಸ್ವಲ್ಪಮಟ್ಟಿಗೆ ಕೆಲಸವಾಗಿದೆ ಅದನ್ನೆಲ್ಲಾ ಪೂರ್ಣ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಆ ದೃಷ್ಟಿಯಲ್ಲಿ ತಮಗೆ ಭರವಸೆ ಕೊಡುವುದೇನೆಂದರೆ ೨೫ ಲಕ್ಷ ರೂಪಾಯಿ ಏನು ಅಲ್ಲಿ ಕಾಲೇಜಿಗೆ ಬೇಕೆಂದು ಇದೆ. ಅಥವಾ ಇನ್ನೂ ಹೆಚ್ಚು ಎಸ್ಟಿಮೇಟ್ ಆದಕ್ಕೆ ಆಗಬಹುದು. ಏಕೆಂದರೆ ಪಿ.ಡಬ್ಲ್ಯೂ.ಡಿ. ನಿಯಮದ ಪ್ರಕಾರ ಎಸ್ಕಲೇಷನ್ ಚಾರ್ಜ್ ೧೫ ಪರ್ಸೆಂಟ್ ಜಾಸ್ತಿಯಾಗುತ್ತದೆ. ಅದನ್ನು ಸಹ ಸೇರಿಸಿ ಆ ಹಣವನ್ನು ಕೊಡುತ್ತೇವೆಂದು ಹೇಳುತ್ತೇನೆ.

ಶ್ರೀ ವಿ.ಪಾಪಣ್ಣ: ಮಾನ್ಯ ಅಧ್ಯಕ್ಷರೆ, ಇವರು ೧೯ ಕೋಟಿ ರೂಪಾಯಿಯನ್ನು ಹುಡ್ಕೋದಿಂದ ತರಿಸಿಕೊಂಡು ಕೊಡುತ್ತೇವೆಂದು ಹೇಳಿದರು. ಕಳೆದ ಸಾಲಿನಲ್ಲಿ ಉನ್ನತ ಶಿಕ್ಷಣ ಇಲಾಖೆಯಿಂದ ಕೇವಲ ೩೩ ಸಾವಿರ ರೂಪಾಯಿ ಮಾತ್ರ ಕೊಟ್ಟಿದ್ದಾರೆ. ಇನ್ನು ೨೫ ಲಕ್ಷ ರೂಪಾಯಿ ಬೇಕು ಎಂದರೆ ೭೦ ವರ್ಷಗಳು ಬೇಕಾಗುತ್ತದೆ. ಇನ್ನು ಹುಡ್ಕೋದಿಂದ ಆ ಹಣ ಬಂದು ಕೊಡಬೇಕು ಎಂದರೆ ಈಗಾಗಲೇ ಆ ಕಟ್ಟಡ ಸ್ಥಗಿತಗೊಂಡಿದೆ. ಆ ಕಟ್ಟಡ ಮುಖ್ಯರಸ್ತೆಯಲ್ಲಿ ಸಿಗುತ್ತದೆ. ಅದು ಬೈಪಾಸ್ ರಸ್ತೆಯಲ್ಲಿ ಆ ಕಟ್ಟಡ ಇದೆ. ಅದಕ್ಕೆ ಒಂದು ಬಾಗಿಲು ಇಲ್ಲ ಎಲ್ಲಾ ಕಿತ್ತುಕೊಂಡು ಹೋಗಿದ್ದಾರೆ. ಅದನ್ನು ನೋಡಿದವರು ಇದು ದೇವರಾಜ್ ಅರಸು ಅವರ ಕಟ್ಟಡವೇ ಎಂದು ಹೇಳುತ್ತಾರೆ. ಅದನ್ನು ನೋಡಿದರೆ ಮನಸ್ಸಿಗೆ ನೋವಾಗುತ್ತದೆ. ಆದುದರಿಂದ ತಮ್ಮ ಇಲಾಖೆಯಿಂದ ಇದಕ್ಕೆ ಬೇಕಾದ ಹಣವನ್ನು ಕೊಡಿ. ಹುಡ್ಕೋ ನೆರವನ್ನು ಕಾಯಬೇಡಿ. ಇಲಾಖೆಯಿಂದ ಕೊಟ್ಟು ಕಟ್ಟಡವನ್ನು ಕಟ್ಟಿ ದಿವಂಗತ ದೇವರಾಜ್ ಅರಸು ಅವರ ಆತ್ಮಕ್ಕೆ ಶಾಂತಿ ಸಿಗಬೇಕು. ಪುಣ್ಯ ತಿಥಿ ಮಾಡಿ ದೇವರಾಜು ಅರಸ್ ಅವರ ಹೆಸರನ್ನು ಕೊಂಡಾಡುತ್ತೀರಿ. ಆದರೆ ಅವರ ಹೆಸರಿನಲ್ಲಿ ಇರುವಂತಹ ಕಟ್ಟಡವನ್ನು ಪೂರ್ಣ ಮಾಡುವುದಕ್ಕೆ ನಿಮ್ಮ ಇಲಾಖೆಯಿಂದ ಹಣ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಕಳೆದ ನಾಲ್ಕು ವರ್ಷಗಳ ಹಿಂದೆ ಕುವೆಂಪು ನಗರಕ್ಕೆ ಒಂದು ಪ್ರಥಮ ದರ್ಜೆ ಕಾಲೇಜನ್ನು ಕೊಟ್ಟರು. ಈಗ ಅಲ್ಲಿ ಕಟ್ಟಡ ಇದೆ, ವಿದ್ಯಾರ್ಥಿಗಳು ಇಲ್ಲ. ಕುವೆಂಪು ಹೆಸರಿಗೆ ತಕ್ಕಂಥ ಕಂಪು, ಇಂಪು ಇಲ್ಲ. ಈಗ ವಿದ್ಯಾರ್ಥಿಗಳು ಕಂಗಾಲಾಗಿದ್ದಾರೆ. ಅಲ್ಲಿ ಅಧ್ಯಾಪಕರು ಕೂಡ ಇಲ್ಲ. ಈಗಾಗಲೇ ಹಲವಾರು ಪತ್ರಗಳನ್ನು ಬರೆದು ಹೇಳಿದ್ದೇವೆ.

ಅಧ್ಯಕ್ಷರು: ಹುಣಸೂರು ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ತಮ್ಮ ಪ್ರಶ್ನೆ ಇರಬೇಕು.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಪ್ರಥಮ ದರ್ಜೆ ಕಾಲೇಜಿಗೆ ಸಂಬಂಧಪಟ್ಟದ್ದು ಅದಕ್ಕೆ ಅವರು ಹೇಳಲಿ.

ಡಾ: ಜಿ.ಪರಮೇಶ್ವರ್: ಮಾನ್ಯ ಅಧ್ಯಕ್ಷರೆ, ಇವತ್ತು ದೇವರಾಜು ಅರಸ್ ಅವರ ಬಗ್ಗೆ ನನ್ನೊಬ್ಬನಿಗೆ ಅಲ್ಲ ಇಲ್ಲಿ ಇರತಕ್ಕಂಥ ಎಲ್ಲಾ ಸದಸ್ಯರಿಗೆ ಕೂಡ ಗೌರವ ಇದೆ. ಅವರ ಹೆಸರಿನಲ್ಲಿ ಪ್ರಾರಂಭ ಮಾಡಿರತಕ್ಕಂಥ ಈ ಕಾಲೇಜಿಗೆ ಒಂದು ಕಟ್ಟಡವಾಗಬೇಕೆಂದು ತಹುಗೆ ಎಷ್ಟು ಕಾಳಜಿ ಇದೆಯೋ ಅಷ್ಟೇ ಕಾಳಜಿ ನಮಗೂ ಇದೆ. ಈಗಾಗಲೇ ಹುಡ್ಕೋ ನೆರವು ಅಂತಿಮ ತೀರ್ಮಾನದಲ್ಲಿದೆ. ಆದುದರಿಂದ ನಾನು ತಮಗೆ, ಈ ವರ್ಷವೇ ಆ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಎಲ್ಲಾ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಭರವಸೆಯನ್ನು ಕೊಡುತ್ತೇನೆ. ಹಾಗೂ ಮಾನ್ಯ

ಶಂಕರಲಿಂಗೇಗೌಡರು ಏನು ಹೇಳಿದ್ದಾರೆ, ಆ ಕುವೆಂಪು ನಗರದಲ್ಲಿ ಇರುವಂತಹ ಕಾಲೇಜನ್ನು ಕೂಡ ಈ ಕಾರ್ಯಕ್ರಮದಲ್ಲಿ ಸೇರಿಸಿದ್ದೇವೆ. ಒಟ್ಟು ೪೫ ಕಾಲೇಜುಗಳು ಈ ಕಾರ್ಯಕ್ರಮದಲ್ಲಿ ಸೇರಿದೆ.

ಕಡೂರು ತಾಲ್ಲೂಕು ಸಖರಾಯಪಟ್ಟಣದಲ್ಲಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವುದು.

೧೬೩(೧೬೯೩)

ಶ್ರೀ ಕೆ.ಬಿ.ಮಲ್ಲಿಕಾರ್ಜುನ (ಬೀರೂರು): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೨೦೦೧-೨೦೦೨ನೇ ಸಾಲಿನಲ್ಲಿ ಹೊಸದಾಗಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಯೋಚಿಸಿದೆಯೆ;

ಆ) ಹಾಗಿದ್ದಲ್ಲಿ ಕಡೂರು ತಾಲ್ಲೂಕು ಸಖರಾಯಪಟ್ಟಣದಲ್ಲಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುವುದೆ?

ಡಾ: ಜಿ.ಪರಮೇಶ್ವರ: (ಉನ್ನತ ಶಿಕ್ಷಣ ಸಚಿವರು):

ಅ) ಇಲ್ಲ.

ಆ) ಸದ್ಯಕ್ಕಿಲ್ಲ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ: ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯನ್ನು ನಾನು ಕಳೆದ ೧೦ ವರ್ಷಗಳಲ್ಲಿ ಐದು ಬಾರಿ ಕೇಳಿದ್ದೇನೆ. ಮೊದಲನೆ ಪ್ರಶ್ನೆಗೆ ಪರಿಶೀಲನೆ ಮಾಡುತ್ತೇವೆ, ಅಗತ್ಯ ಇದ್ದಾಗ ಮಂಜೂರು ಮಾಡುತ್ತೇವೆಂದು ಉತ್ತರ ಬರುತ್ತಿದೆ. ಆದರೆ ಏನೂ ಪ್ರಗತಿಯಾಗಿಲ್ಲ. ಒಂದು ಬಾರಿ ಈಗಾಗಲೇ ವಿಶ್ವವಿದ್ಯಾನಿಲಯದವರು ಬಂದು ಸ್ಥಳ ಪರಿಶೀಲನೆ ಮಾಡಿ ಅಲ್ಲಿ ಒಂದು ಕಾಲೇಜಿನ ಅವಶ್ಯಕತೆ ಇದೆ ಎಂದು ಹೇಳಿ ವರದಿ ಕೊಟ್ಟಿದ್ದಾರೆ. ಈಗ ಸದ್ಯಕ್ಕೆ ಅಗತ್ಯ ಇಲ್ಲವೆಂದು ಇವರು ಹೇಳಿದ್ದಾರೆ. ಸರ್ಕಾರಕ್ಕೆ ಸಖರಾಯಪಟ್ಟಣದಲ್ಲಿ ಒಂದು ಪ್ರಥಮ ದರ್ಜೆ ಕಾಲೇಜಿನ ಅವಶ್ಯಕತೆ ಇದೆ ಎನ್ನುವುದು ಗಮನಕ್ಕೆ ಬಂದಿದೆಯಾ? ಇನ್ನು ಎರಡನೆಯದಾಗಿ ಆದ್ಯತೆ ಮೇಲೆ ಈ ಒಂದು ಪ್ರಥಮ ದರ್ಜೆ ಕಾಲೇಜನ್ನು ಈ ವರ್ಷ ಪ್ರಾರಂಭ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತದೆಯೇ?